ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

## CC No. 7741/2021 CW-3 PW-2

| | | |
|---|---|---|
| ಹೆಸರು | : | ಮಹಮ್ಮದ್ ಇಸಾಕ್ |
| ತಂದೆಯ/ಗಂಡನ ಹೆಸರು | : | ಗೌಸಸಾಬ |
| ವಯಸ್ಸು | : | 22 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 24-07-2024

### ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ

ಚಾಸಾ-1, 2 ರವರ ಪರಿಚಯ ಇದೆ. ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದರಿಂದ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-**2** ಬಿ ಎಂದು ಗುರುತಿಸಲಾಯಿತು. ದಿಃ 22-06-2021 ರಂದು ಬೆಳಿಗ್ಗೆ 11-00 ರಿಂದ 1-00 ಗಂಟೆಯವರೆಗೆ ಲಕ್ಷ್ಮೀಕ್ಯಾಂಪಿನಲ್ಲಿರುವ ರಂಜಾನಬೀರವರ ಮನೆಯಲ್ಲಿ ಚಾಸಾ-1 ರವರು ತೋರಿಸಿದ ಮೇರೆಗೆ ಚಾಸಾ-1 ಮತ್ತು ಆರೋಪಿತರ ನಡುವೆ ಆದ ಜಗಳಕ್ಕೆ ಸಂಬಂಧಿಸಿ ಪಂಚನಾಮೆ ಪೂರೈಸಿರುತ್ತಾರೆ. ನಂತರ ಸ್ಥಳದಲ್ಲಿ ಭಾವಚಿತ್ರ ತೆಗೆಯಲಾಗಿರುತ್ತದೆ ಸಾಕ್ಷಿಯು ನಿಪಿ-4 ನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

### ಪಾಟೀ ಸವಾಲು: ಮಾನ್ಯ ಸ ಸ ಅ ರವರಿಂದ

ಸದರಿ ದಿನ ಪಂಚನಾಮೆಯನ್ನು ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಮಾಡಲಾಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ನಿಪಿ-2 ರಲ್ಲಿರುವ ಅಂಶಗಳ ಬಗ್ಗೆ ಪೋಲೀಸರು ನನಗೆ ಓದಿ ಹೇಳಿರುತ್ತಾರೆ. ನಿಪಿ-2 ಬಿ ಯನ್ನು ನಾನು ಪಂಚನಾಮೆ ಸ್ಥಳದಲ್ಲಿ ಮಾಡಿರುತ್ತೇನೆ. ನನಗೆ ಪಂಚರಾಗಲು ಚಾಸಾ-1 ರವರು ಕರೆಸಿರುತ್ತಾರೆ. ಚಾಸಾ-1 ರವರು ನನ್ನ ಸಂಬಂಧಿಕರಲ್ಲ. ನಿಪಿ-4 ನ್ನು ರಂಜಾನಬೀರವರ ಮನೆಯ ಮುಂದೆ ತೆಗೆಯಲಾಗಿದ್ದು, ಚಾಸಾ-1 ರವರು ಸದರಿಯವರ ಮನೆಯಲ್ಲಿ ವಾಸವಿದ್ದರು. ನಾನು ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಿಪಿ-4 ರಲ್ಲಿರುವ ಮನೆ ರಂಜಾನಬೀರವರಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.

ದಿನಾಂಕಃ 24-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ನಿಪಿ-1 ನ್ನು ಎಸ್ ಎಸ್ ಕೆ ವಕೀಲರ ಕಛೇರಿಯಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ. ಸದರಿ ದೂರನ್ನು ನಾನು ಹೇಳಿದ ಪ್ರಕಾರ ಬೆರಳಚ್ಚು ಮಾಡಲಾಗಿರುತ್ತದೆ. ನಾನು ಮದುವೆ ನಂತರ ಗಂಡನ ಮನೆಯಲ್ಲಿ 4 ತಿಂಗಳಗಳ ಕಾಲ ವಾಸವಾಗಿದ್ದೆ. ನಂತರ ಕವಿತಾಳ ಗ್ರಾಮಕ್ಕೆ ಬಂದು ಒಂದು ತಿಂಗಳ ವಾಸವಿದ್ದು ನಂತರ ಸಿಂಧನೂರಿಗೆ ಬಂದಿರುತ್ತೇನೆ. ಈಗ 3 ವರ್ಷಗಳಿಂದ ನಾನು ಸಿಂಧನೂರಿನಲ್ಲಿಯೇ ನನ್ನ ಮಾವನ ಮನೆಯಲ್ಲಿ ವಾಸವಿದ್ದೇನೆ. ನಾನು ಸಿಂಧನೂರಿನಲ್ಲಿ 2 ರಿಂದ 6 ನೇ ಆರೋಪಿತರ ಮನೆಯಲ್ಲಿಯೇ ವಾಸವಿದ್ದೆ. ಸದರಿಯವರು ನಮಗೆ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದು ನಾನು ಮತ್ತು 1 ನೇ ಆರೋಪಿ ಬಾಡಿಗೆ ಆಧಾರದಲ್ಲಿ ಸದರಿಯವರ ಮನೆಯಲ್ಲಿದ್ದೆವು ಎಂದರೆ ಸರಿ ಅಲ್ಲ. ನನಗೆ ಚಾಸಾ-14 ರವರ ಪರಿಚಯ ಇಲ್ಲ. ನಾನು ಸದರಿಯವನೊಂದಿಗೆ 1 ನೇ ಆರೋಪಿಯ ಮುಖಾಂತರ ದೂರವಾಣಿ ಕರೆಯಲ್ಲಿ ಮಾತನಾಡಿರುತ್ತೇನೆ. ನಾನು ಚಾಸಾ-14 ರವರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು ಸದರಿಯವರು ನನ್ನ ಭಾವಚಿತ್ರ ಹಾಗೂ ಸಂಭಾಷಣೆಯನ್ನು ನನ್ನ ಗಂಡನಿಗೆ ಕಳುಹಿಸಿದ್ದರಿಂದ ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಜೀವನಾಂಶ ಪ್ರಕರಣದಲ್ಲಿ ಹಾಜರಪಡಿಸಿರುವ ಸಿಡಿಯನ್ನು ನನ್ನ ಮಾವ ಚಾಸಾ-10 ಮತ್ತು 11 ರವರು ಹೇಳಿದ ಮೇರೆಗೆ ಮಾಡಲಾಗಿರುತ್ತದೆ. ಸದರಿ ಸಿಡಿಯಲ್ಲಿ ಚಾಸಾ-14 ರವರು ಅಂದಾಜು 20 ನಿಮಿಷಗಳ ಕಾಲ ಮಾತನಾಡಿರುತ್ತಾರೆ ಎಂದರೆ ಸರಿ. ಸದರಿಯವರು ಸದರಿ ಸಂಭಾಷಣೆಯಲ್ಲಿ ದೂರವಾಣಿಯಲ್ಲಿ ಮಾತನಾಡಿಸಿದ್ದು 1 ನೇ ಆರೋಪಿಯೇ ಎಂದು ನುಡಿದಿರುತ್ತಾನೆ. ಸದರಿ ಸಿಡಿಯಲ್ಲಿ ನಾನು ಹಿಂದುಗಡೆ ಇದ್ದು ಅದನ್ನು ಚಿತ್ರೀಕರಣ ಮಾಡಿಸಿರುತ್ತೇನೆ. ಸದರಿ ವಿಡಿಯೋ ಚಿತ್ರೀಕರಣದಲ್ಲಿ 7 ನಿಮಿಷದ ಬಳಿಕ ಚಾಸಾ-14 ರವರು ಅವಾಚ್ಯವಾಗಿ ಒಬ್ಬ ವ್ಯಕ್ತಿಗೆ ಬೈದಿದ್ದು ನಂತರ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿಗೆ ನಾನು ಯಾರಿಗೆ ಬೈಯ್ಯುಬೇಕು ಎಂದು ಆತನ ಹೆಸರು ಕೇಳಿರುತ್ತಾನೆ ಎಂದರೆ ಸರಿ. ನನ್ನ ಹಾಗೂ 1 ನೇ ಆರೋಪಿಯ ನಡುವೆ ವೈಮನಸ್ಸಿದ್ದು, 2 ರಿಂದ 6 ನೇ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ ಅಲ್ಲ. 2 ರಿಂದ 6 ನೇ ಆರೋಪಿತರ ಮನೆಯಲ್ಲಿ ನಾನು ವಾಸವಿದ್ದು, ಚಾಸಾ-14

ರವರು ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದು ಸದರಿ ವಿಷಯವನ್ನು ಆರೋಪಿತರು 1 ನೇ ಆರೋಪಿಗೆ ತಿಳಿಸಿದ್ದರಿಂದ ನಾನು ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಪ್ರಕರಣದಲ್ಲಿ ಎರಡುಬಾರಿ ಪಂಚನಾಮೆ ಪೂರೈಸಿದ್ದು ಅದನ್ನು ಪೋಲೀಸರ ಹಾಗೂ ಪಂಚರ ಸಮಕ್ಷಮ ಮಾಡಲಾಗಿರುತ್ತದೆ. ಸದರಿ ಪಂಚರೆಂದರೆ ಚಾಸಾ-2, 3 ಹಾಗೂ 5. ನಾನು ಈ ಹಿಂದೆ ಕವಿತಾಳ ಪೋ.ಠಾಣೆಯಲ್ಲಿ 1 ನೇ ಆರೋಪಿ ವಿರುದ್ಧ ದೂರು ಸಲ್ಲಿಸಲು ಹೋಗಿದ್ದೆ ಎಂದರೆ ಸರಿ. ಆಗ ಪೋಲೀಸರು 1 ನೇ ಆರೋಪಿ ವಿರುದ್ಧ ಮಾತ್ರ ದೂರು ತೆಗೆದುಕೊಳ್ಳಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ಕಾರಣ ನಾನು ನಂತರ ಎಲ್ಲ ಆರೋಪಿತರ ವಿರುದ್ಧ ರಾಜಕೀಯ ಒತ್ತಡ ಹಾಕಿಸಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ರಾಜಿ ಮಾತುಕತೆಗಾಗಿ 4 ನೇ ಆರೋಪಿಯ ಮನೆಗೆ ನಾನು, ಚಾಸಾ-6, 7, 10, 11 ಹೋಗಿದ್ದೆವು. ಸದರಿಯವರ ಮನೆಯಲ್ಲಿ ರಾಜಿ ಮಾತುಕತೆ ಮಾತನಾಡಿ ಬಂದಿರುತ್ತೇವೆ. ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ ಅಲ್ಲ.

ಘಟನೆಯು ದಿಃ 13-06-2021 ರಂದು ನಡೆದಿದ್ದು ದೂರನ್ನು ದಿಃ 21-06-2021 ರಂದು ಸಲ್ಲಿಸಿರುತ್ತೇನೆ. ಸದರಿ ಘಟನೆಯು 4 ನೇ ಆರೋಪಿಯ ಮನೆಯಲ್ಲಿ ನಡೆದಿರುತ್ತದೆ. ನಾವು ಮೊದಲಿಗೆ ದೂರನ್ನು ಕವಿತಾಳ ಪೋ.ಠಾಣೆಗೆ ಸಲ್ಲಿಸಲು ಹೋಗಿದ್ದು ಅಲ್ಲಿ ಅವರು ಅದನ್ನು ಸ್ವೀಕರಿಸದ ಕಾರಣ ಸಿಂಧನೂರಿಗೆ ಬಂದು ದೂರು ಸಲ್ಲಿಸಿದ್ದು ಕಾರಣ ವಿಳಂಬವಾಗಿರುತ್ತದೆ. ಸದರಿ ಅಂಶವನ್ನು ನಿಪಿ-1 ರಲ್ಲಿ ಬರೆಸಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿ ನಾನು ಎಷ್ಟು ಬಾರಿ ಹೇಳಿಕೆ ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ದೂರನ್ನು ಸಲ್ಲಿಸಲು ನಾನು, ಚಾಸಾ-6 ಮತ್ತು 11 ರವರು ಹೋಗಿರುತ್ತೇವೆ. ಆದರೆ ನಿಖರವಾದ ಸಮಯ ನನಗೆ ನೆನಪಿಲ್ಲ.

2 ಮತ್ತು 3 ನೇ ಆರೋಪಿತರು ನಾರಾಯಣಪೂರದಲ್ಲಿ ವಾಸವಿರುತ್ತಾರೆ ಎಂದರೆ ಸರಿ. 2 ನೇ ಆರೋಪಿಗೆ ಅಂದಾಜು 50 ವರ್ಷ ವಯಸ್ಸಿರುತ್ತದೆ. ಸದರಿಯವರಿಗೆ 65-70 ವರ್ಷ ವಯಸ್ಸಾಗಿರುತ್ತದೆ ಎಂದರೆ ಸರಿ ಅಲ್ಲ. ಘಟನೆಯ ದಿನ ಸದರಿಯವರಿಬ್ಬರು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ ಅಲ್ಲ. ಘಟನೆಯಾದ ದಿನ ನಾನು ಚಾಸಾ-10 ರವರ ಮನೆಗೆ ಹೋಗಿರುತ್ತೇನೆ. ಘಟನೆಯಾದ 4-5 ದಿನಗಳ ನಂತರ ನಾನು ದೂರು ಸಲ್ಲಿಸಲು ಕವಿತಾಳಕ್ಕೆ ಹೋಗಿರುತ್ತೇನೆ. ಸದರಿ 4-5 ದಿನಗಳ ಕಾಲ ನಾನು ಚಾಸಾ-10 ರವರ ಮನೆಯಲ್ಲಿ ಇದ್ದೆ. 6 ನೇ ಆರೋಪಿ ತನ್ನ ಪ್ರತ್ಯೇಕ

ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಸದರಿಯವರು ಸಹ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ ಅಲ್ಲ. ಆರೋಪಿತರು ನನಗೆ ಮಾನಸಿಕ, ದೈಹಿಕ ಕಿರುಕುಳ ನೀಡಿಲ್ಲ, ಹೊಡೆಬಡೆ ಮಾಡಿಲ್ಲ, ಅವಾಚ್ಯವಾಗಿ ಬೈದಿಲ್ಲ ಹಾಗೂ ಜೀವದ ಬೆದರಿಕೆ ಹಾಕಿಲ್ಲ ಮತ್ತು ವರದಕ್ಷಿಣೆ ಕಿರುಕುಳ ನೀಡಿಲ್ಲ ಎಂದರೆ ಸರಿ ಅಲ್ಲ. ಚಾಸಾ-8 ರವರು ನನ್ನ ಮಾವ. ಚಾಸಾ-12 ಮತ್ತು 13 ನನ್ನ ಸಂಬಂಧಿಕರು. ಯಾವುದೇ ಘಟನೆ ನಡೆಯದಿದ್ದರೂ ಸಹ ನಾನು ಹಾಗೂ ಚಾಸಾ-14 ರವರು ಸೇರಿ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳುಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.